ಶ್ರೀ ಎ. ವಿ. ನರಸಿಂಹರೆಡ್ಡಿ.—ಜಮೀನನ್ನು ಮುಂಜೂರುಮಾಡಿದ ಮೇಲೆ ಅದನ್ನು ಅಳತೆಮಾಡಿ ಸ್ವಾಧೀನಕ್ಕೆ ಕೊಡುವುದು ಯಾವಾಗ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಕ್ಕಾ ಪೋಡಿ ಮಾಡಿಕೊಡಬೇಕು. ಆದರೆ ಈಗ ಜಮೀನಿಗೆ ಒತ್ತಡ ಹೆಚ್ಚಾಗಿರುವುದರಿಂದ ಕಚ್ಚಾ ಪೋಡಿ ಮಾಡಿಕೊಡುತ್ತೇವೆ. ಒಂದೊಂದುವೇಳೆ ಜನರು ಹದ್ದುಮೀರಿ ಇತರರ ಜಮೀನನ್ನು ಆಕ್ರಮಣಮಾಡಿಕೊಳ್ಳುತ್ತಾರೆ.

---

## Grant of Lands for Cardamom cultivation.

*Q.*—667. Sri G. PUTTASWAMY (Chikmagalur — Mudigere — Scheduled Castes).—

Will the Government be pleased to state :—

(*a*) whether it has come to their notice that much hardship is being experienced by the application of Rule 43 of the Land Revenue Rules for grant of lands under cardamom cultivation imposing restrictions on a holding in Chikmagalur, Mudigere and Sakalespur taluks where cardamom cultivation is excessive ;

(*b*) whether they would consider the question of including cardamom cultivation under the Rule for the grant of lands for coffee cultivation (Appendix N of Land Revenue Rules, Part I) ?

*A.*—Sri H. M. CHANNABASAPPA (Minister for Revenue and Agriculture).—

(*a*) No such instances have come to the notice of Government.

(*b*) This will be examined.

ಶ್ರೀ ಜಿ. ಪುಟ್ಟಸ್ವಾಮಿ.—ಕಾಫಿ ಮತ್ತು ಏಲಕ್ಕಿ ಬೆಳೆಯುವ ಜಮೀನುಗಳು ಮಲೆನಾಡಿನಲ್ಲಿ ಕೆಲವು ಕಡೆ ಇವೆ, ಅವುಗಳಲ್ಲಿ ಬೇರೆ ಫಸಲನ್ನಿಡುವುದಕ್ಕಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆ ಮರಗಳು ಬೆಳೆಯಬಹುದು, ಬೇರೆ ಯಾವ ಫಸಲನ್ನಿಡಬಹುದೆಂಬುದು ಗೊತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಮತ್ತು ಕಾಫಿ ಬೆಳೆಯುವ ಜಮೀನುಗಳಲ್ಲಿ ಅವು ಮಾತ್ರ ಬೆಳೆಯುತ್ತವೆಯೇ ಏನಾ ಬೇರೆ ಫಸಲು ಬೆಳೆಯುವುದಿಲ್ಲವೆಂಬುದು ಅವಗಾಹನೆಗೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಕಾಫಿ, ಏಲಕ್ಕಿಯನ್ನೇ ಬೆಳೆಯುತ್ತಾರೆಂದು ತಿಳಿದು ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಬೆಳೆಯುವ ಜಮೀನಿನಲ್ಲಿ ಏಲಕ್ಕಿಯನ್ನೇ ಬೆಳೆಯಬೇಕಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಕಾಫಿ ಬೆಳೆಯ ಹಾಗೆ ಪ್ರತ್ಯೇಕತೆಯನ್ನು ಹೊಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದಮೇಲೆ ಕಾಫಿ ಬೆಳೆಗೆ ಯಾವ ಕಾನೂನಿದೆಯೋ ಅದೇ ಕಾನೂನನ್ನು ಏಲಕ್ಕಿ ಬೆಳೆಗೂ ಅನ್ವಯಿಸುವುದು ಸೂಕ್ತವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಕೈಗಾರಿಕಾ ಗ್ರೂಪುಗಳಿಗೂ ಒಂದೇ ರೂಲ್ಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಏಲಕ್ಕಿ ಬೆಳೆಯುವ, ಜಮೀನು ಮಲೆನಾಡಿನಲ್ಲಿ ಹೆಚ್ಚಾಗಿದ್ದು ಅದನ್ನು ವಿಲೇವಾರಿ ಮಾಡದಿದ್ದರೆ ಸರ್ಕಾರಕ್ಕೆ ನಷ್ಟವಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜರಾಬಾದ್ ಮೂಡಿಗೆರೆ ಈ ಎರಡು ತಾಲ್ಲೂಕುಗಳಲ್ಲಿರುತ್ತದೆ. ಅಲ್ಲಿಗೆ 43ನೆಯ ಸೆಕ್ಷನ್‌ನಿಂದ ತೊಂದರೆಯೆಂದು ವರದಿ ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಂದ ಕಾಫಿ ಜಮೀನಿನ ಹಾಗೆ ಏಲಕ್ಕಿ ಜಮೀನನ್ನೂ ಸಹ ವಿಲೆ ಮಾಡಲು ಅಡ್ಡಿಯಿಲ್ಲ, ಕಾಫಿ ಜಮೀನು ವಿಲೇವಾರಿಮಾಡುವ ರೂಲ್ಸಿಗೆ ಅನುಗುಣವಾಗಿ ಏಲಕ್ಕಿ ಜಮೀನನ್ನೂ ವಿಲೇ ಮಾಡಬಹುದು ಎಂದು ವರದಿ ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಬದಲಾಗಿ 43ನೆಯ ರೂಲ್ಸ್‌ಪ್ರಕಾರ ಏಲಕ್ಕಿಗೆ ಅನುಕೂಲವಾಗಿರುವ ಜಮೀನನ್ನು ಕೊಡುವುದಕ್ಕೆ ಅಡ್ಡಿ ಆತಂಕ ಬಂದಿಲ್ಲವೆಂದು ವರದಿಯಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗಾಗಲೇ ತಾಲ್ಲೂಕುಗಳಲ್ಲಿ ಏಲಕ್ಕಿಗೆ ಸಂಬಂಧಪಟ್ಟ ಜಮೀನಿನ ವಿಲೇ ಸಂಬಂಧದಲ್ಲಿ ಬಹಳ ನಿಧಾನವಾಗಿದೆ ಎಂದು ಅರ್ಜಿಗಳು ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರುವ ವರದಿಯಂತೆ ಹತ್ತು ಎಕರೆಗೆ ಒಳಪಟ್ಟ ಜಮೀನನ್ನು ಕೊಡಬೇಕೆಂದು ಇರುವ ರೂಲ್ಸ್‌ಪ್ರಕಾರ ಜಮೀನು ಕೊಡಲಾಗುತ್ತಾ ಇದೆ. ಅದರ ಪ್ರಕಾರ ಪಡೆದು ವ್ಯವಸಾಯ ಮಾಡುತ್ತಿದ್ದಾರೆ, ಅವರಿಗೆ ಯಾವ ತೊಂದರೆಯೂ ಆಗಿಲ್ಲ ಎಂದು ತಿಳಿದುಬಂದಿದೆ.

12-30 P.M.

ಶ್ರೀ ಜಿ. ಪುಟ್ಟಸ್ವಾಮಿ.—ಅಂಥ ಅಡ್ಡಿಗಳೇನಾದರೂ ಇದ್ದರೆ ಅವುಗಳನ್ನು ಜಾಸ್ತಿ ಪೈನಲ್ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ನಿಂದರ್ಭಗಳಿದ್ದು-ಅವುಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅವುಗಳನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ತಾವು ಹೇಳಿರುವ ಪ್ರಕಾರ 10 ಎಕರೆಗಳಿಗಿಂತ ಕಡಮೆ ಪ್ರದೇಶದಲ್ಲಿ ಏಲಕ್ಕಿ ಬೆಳೆಯತಕ್ಕವರು ಎಷ್ಟು ಭೂಮಿ ಕೇಳಿದರೂ ತಾವು ಕೊಡುತ್ತೀರಾ !

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಕೊಡುತ್ತೇನೆಂದು ಹೇಳಲಿಲ್ಲ. ಪರಿಶೀಲನೆ ಮಾಡುವುದಾಗಿ ತಿಳಿಸಿದ್ದೇನೆ.

---